# ಅಂಶ - 4 ವಾಕ್ಯ ಭೇದಗಳು - ಪ್ರಯೋಗಗಳು

**ವಿಷಯ ಕ್ರಮ**


4.0 ಉದ್ದೇಶ

4.1 ಪೀಠಿಕೆ

4.2 ವಾಕ್ಯ ಭೇದಗಳು

4.3 ಸರಳ ವಾಕ್ಯ

- 4.3.1 ಕರ್ತೃ ಪ್ರಧಾನ ವಾಕ್ಯ
- 4.3.2 ಸಮೀಕರಣಾತ್ಮಕ ವಾಕ್ಯ
- 4.3.3 ಚತುರ್ಥೀ ಕರ್ತೃಕ ವಾಕ್ಯ

**ಅಭ್ಯಾಸ - 1**

- 4.3.4 ಕರ್ಮ ಪ್ರಧಾನ ವಾಕ್ಯ
- 4.3.5 ನಿಷೇಧ ವಾಕ್ಯ

**ಅಭ್ಯಾಸ - 2**

4.4. ಮಿಶ್ರವಾಕ್ಯ

- 4.4.1 ಸಮುಚ್ಚಯ
- 4.4.2 ವಿಚಯ
- 4.4.3 ವಿರುದ್ಧಾರ್ಥಕ
- 4.4.4 ಕಾರ್ಯಕಾರಣ
- 4.4.5 ವಿವರಣಾತ್ಮಕ
- 4.4.6 ವಿಕಲ್ಪಾರ್ಥಕ
- 4.4.7 ಉದ್ಧರಣಾತ್ಮಕ

**ಅಭ್ಯಾಸ - 3**

4.5 ಸಂಯುಕ್ತ ವಾಕ್ಯಗಳು

**ಅಭ್ಯಾಸ - 4**

4.6 ಸಾರಾಂಶ

**ಅಭ್ಯಾಸಗಳಿಗೆ ಉತ್ತರಗಳು**


## 4.0 ಉದ್ದೇಶ

ಈ ಅಂಶವನ್ನು ಓದಿದ ಮೇಲೆ ನೀವು

- ವಾಕ್ಯ ಪ್ರಕಾರಗಳನ್ನು ಅವುಗಳ ಭೇದಗಳನ್ನು ಗುರುತಿಸಬಲ್ಲವರಾಗುತ್ತೀರಿ.
- ವಿವಿಧ ವಾಕ್ಯಗಳಲ್ಲಿರುವ (ಸರಳ , ಮಿಶ್ರ ಸಂಯುಕ್ತ) ಮುಖ್ಯಾಂಶಗಳನ್ನು ಗುರುತಿಸುವವರಾಗುತ್ತೀರಿ.
- ಕೃದಂತ ವಿಶೇಷಣ ಮತ್ತು ಗೌಣ ವಾಕ್ಯಗಳಿಂದ ಕೂಡಿ ಬರೆಯಬಲ್ಲವರಾಗುತ್ತೀರಿ.

## 4.1 ಪೀಠಿಕೆ

ಹಿಂದಿನ ಅಂಶದಲ್ಲಿ ಪದರಚನೆಯ ಬಗ್ಗೆ, ವಿಭಕ್ತಿ ಪ್ರತ್ಯಯಗಳ ಬಗ್ಗೆ ವಿವರವಾಗಿ ತಿಳಿದುಕೊಂಡಿರಿ. ಬರೀ ಪದರಚನೆಯ ಜ್ಞಾನವಿದ್ದರೆ ಸಾಲದು. ಪದಗಳನ್ನು ಹೊಂದಿಸಿ ವಾಕ್ಯಗಳನ್ನು ಮಾಡುವ ಕಲೆಯೂ ಅಳವಡಬೇಕು. ವಾಕ್ಯಗಳು ವ್ಯಕ್ತಿಯ ಭಾವಗಳನ್ನು ಬೇರೆಯವರಿಗೆ ತಿಳಿಸುವ ಮಾಧ್ಯಮ. ಆದ್ದರಿಂದ ನಾವು ಏನು ಹೇಳಬೇಕೆಂದಿರುವೆವೋ ಅವನ್ನು ಸ್ಪಷ್ಟವಾಗಿ, ಸರಿಯಾದ ಪದಗಳನ್ನು ಉಪಯೋಗಿಸಿ ಇತರರಿಗೆ ತಿಳಿಯುವಂತೆ ವಾಕ್ಯಗಳಲ್ಲಿ ಹೇಳಬೇಕು. ವಾಕ್ಯದಲ್ಲಿಯ ಯಾವ ಪದಕ್ಕೆ ಹೆಚ್ಚು ಗಮನ, ಮತ್ತು ಒತ್ತು ಕೊಡಬೇಕೆಂಬುದನ್ನು ತಿಳಿದಿರಬೇಕು. ಈ ಅಂಶದಲ್ಲಿ ಅವುಗಳನ್ನು ತಿಳಿದುಕೊಳ್ಳೋಣ.

ವಾಕ್ಯಗಳಲ್ಲಿ (1) ಸರಳ ವಾಕ್ಯ (2) ಮಿಶ್ರ ವಾಕ್ಯ (3) ಸಂಯುಕ್ತ ವಾಕ್ಯಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ. ಕರ್ತೃಪ್ರಧಾನ ವಾಕ್ಯ ಸಮೀಕರಣಾತ್ಮಕ ವಾಕ್ಯ/ಚತುರ್ಥಿ ಕರ್ತೃಕ ವಾಕ್ಯ ಕರ್ಮ ಪ್ರಧಾನ ವಾಕ್ಯ ನಿಷೇದ ವಾಕ್ಯ ಮಿಶ್ರ ವಾಕ್ಯ ಹೀಗೆ ವಿವಿಧ ರೀತಿಯ ವಾಕ್ಯಗಳನ್ನು ಇಲ್ಲಿ ಹೇಳಲಾಗಿದೆ.

## 4.2 ವಾಕ್ಯ ಭೇದಗಳು

ವಾಕ್ಯ ಭೇದಗಳನ್ನು ಅರಿತುಕೊಳ್ಳುವ ಮೂರು ವಿಧಾನಗಳು ಪ್ರಚಲಿತವಿವೆ.

(1) ವಾಕ್ಯ ರಚನೆ
(2) ವಾಕ್ಯಾರ್ಥ ಬೋಧೆ
(3) ವಾಕ್ಯ ವಿಭಜನೆ

ವಾಕ್ಯ ರಚನೆಯಲ್ಲಿ ಉದ್ದೇಶಿತ ಅಭಿಪ್ರಾಯವನ್ನು ಇತರರಿಗೆ ತಿಳಿಯಪಡಿಸಲು ಪದಗಳ ಸೂಕ್ತ ಬಳಕೆ, ಪದಗಳ ಭಿನ್ನ ಭಿನ್ನ ಕಾರ್ಯದ ಬಗೆಗೆ ತಿಳಿವು, ಮಿತವಾದ ಪದದ ಪ್ರಯೋಗದಿಂದ ಪರಮಾವಧಿ ಅರ್ಥದ ಅಭಿವ್ಯಕ್ತಿ, ಇವು ಒಳಗೊಂಡಿವೆ.

ವಾಕ್ಯಾರ್ಥ ಬೋಧೆಯಲ್ಲಿ ಭಾಷೆಯ ಶುದ್ಧ ಸ್ವರೂಪದ ಜ್ಞಾನ ಅಪಾರ್ಥವಾಗದಂತೆ ಹೇಳುವಿಕೆ, ಕೇಳಿದುದನ್ನು ಸರಿಯಾಗಿ ಅರ್ಥಯಿಸಿಕೊಳ್ಳುವುದು. ಯಾವ ಯಾವ ರೀತಿಯ ರಚನೆಯಿಂದ ಹೇಗೆ ಹೇಗೆ ಅರ್ಥ ಬೋಧೆ ಆಗುತ್ತದೆ ಎಂಬುದರ ಪರಿಜ್ಞಾನ, ಇವು ಅಡಕವಾಗಿವ.

ಈ ಮೂರೂ ಕ್ರಿಯೆಗಳಿಂದ ವಾಕ್ಯದ ಅರ್ಥ ನಿರ್ದಿಷ್ಟವಾಗಿ ಆಗುತ್ತದೆ. ಹಾಗೂ ನಿರ್ದಿಷ್ಟವಾದ ವಾಕ್ಯ ರಚನೆಗೆ ಸಹಾಯವಾಗುತ್ತದೆ. ವಾಕ್ಯವೆಂದರೆ ಪದಗಳ ಗುಂಪು, ಹೇಗೆ ಬೇಕಾದರೂ ಹಾಗೆ ಪದಗಳನ್ನು ಇಟ್ಟರೆ ವಾಕ್ಯವಾಗುತ್ತದೆ ಎಂಬ ತಪ್ಪು ಕಲ್ಪನೆ ಹೋಗಬೇಕು. ಒಳ್ಳೆಯ ವಾಕ್ಯಗಳನ್ನು ಕೇಳಿದಾಗ ದೇವಲೋಕದ ಅಮೃತವನ್ನುಂಡಷ್ಟು ಆನಂದ, ತೃಪ್ತಿಯಾಗುತ್ತದೆ ಎಂಬ ಹಿರಿಯರ ಮಾತನ್ನು ಇಲ್ಲಿ ನೆನೆಯಬಹುದು.

ವಾಕ್ಯಗಳಲ್ಲಿ ಮೂರು ಪ್ರಕಾರಗಳು.
(1) ಸರಳ ವಾಕ್ಯ (2) ಮಿಶ್ರ ವಾಕ್ಯ (3) ಸಂಯುಕ್ತ ವಾಕ್ಯ

## 4.3 ಸರಳ ವಾಕ್ಯ

ಸರಳ ವಾಕ್ಯದಲ್ಲಿ ಒಂದು ಮುಖ್ಯ ಕ್ರಿಯಾಪದವಿರುತ್ತದೆ. ಅದಕ್ಕೆ ಪೂರಕವಾಗುವಂತೆ ಕರ್ತೃ, ಕರ್ಮಪದಗಳು ಇರುತ್ತವೆ. ಕರ್ತೃ, ಕರ್ಮ ಕ್ರಿಯಾ ಪದಗಳ ವಿಶೇಷಣಾವ್ಯಯಗಳೂ ಇರಬಹುದು. ಇವಲ್ಲದೆ ಕರಣ, ಸಂಪ್ರದಾನ, ಅಪಾದಾನ, ಅಧಿಕರಣಗಳನ್ನು ಸೂಚಿಸುವ ಪದಗಳೂ ಇರಬಹುದು. ಒಂದು ವಾಕ್ಯದಲ್ಲಿ ಇವೆಲ್ಲ ಇರಲೇಬೇಕೆಂಬ ನಿಯಮವೇನಿಲ್ಲ. ಮೇಲೆ ಹೇಳಿದ ಕರ್ತೃ ಮೊದಲಾದವುಗಳು ಕ್ರಿಯೆಗೆ ಸಂಬಂಧಪಟ್ಟವುಗಳಾದ್ದರಿಂದ ಇವುಗಳಿಗೆ ಕ್ರಿಯಾಕಾರಕ ಅಥವಾ ಕಾರಕ ಎಂದೆನ್ನುತ್ತಾರೆ. ಈ ಕಾರಕಗಳು ಬೇರೆ ಬೇರೆ ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಂಡು ವ್ಯಕ್ತವಾಗುತ್ತವೆ.
ಉದಾಹರಣೆಗೆ ನೋಡಿ :

ಮಗು ಮಲಗುತ್ತದೆ.
ಸಂಗ ಹಣ್ಣು ತಿನ್ನುತ್ತಾನೆ.
ಮಲ್ಲನ ಮಗ ನಿಂಗ ಒಳ್ಳೆಯ ಬಟ್ಟೆ ಹಾಕುತ್ತಾನೆ.
ಕಲ್ಲನ ತಮ್ಮ ಸೋಮ ಕೊಡಲಿಯಿಂದ ಗಿಡ ಕಡಿಯುತ್ತಾನೆ.
ರಾಮನ ತಂಗಿ ಸೀತೆ ಮನೆಯಲ್ಲಿ ತಮ್ಮನಿಗೆ ಅನ್ನ ಉಣಿಸುತ್ತಾಳೆ.
ಮರದಿಂದ ಬಿದ್ದ ಹಣ್ಣು ಸಿಹಿಯಾಗಿರುವುದಿಲ್ಲ.

ಮೇಲಿನ ವಾಕ್ಯಗಳಲ್ಲಿ ಮಗು, ಸಂಗ, ನಿಂಗ, ಸೋಮ, ಸೀತೆ, ಹಣ್ಣು ಇವು ಕ್ರಿಯೆಯನ್ನು ಮಾಡುವುದರಿಂದ ಅಥವಾ ಕ್ರಿಯೆಗೆ ಕಾರಣವಾಗಿರುವುದರಿಂದ, **ಕರ್ತೃ** ಪದಗಳು. ಹಣ್ಣು, ಬಟ್ಟೆ, ಗಿಡ, ಅನ್ನ ಇವು ಕ್ರಿಯೆಯ ಪರಿಣಾಮವನ್ನು ಅಥವಾ ಫಲವನ್ನು ಸ್ವೀಕರಿಸುವುದರಿಂದ **ಕರ್ಮ**ಗಳು. ಕೊಡಲಿ ಕಡಿಯುವ ಕ್ರಿಯೆಗೆ ಸಾಧನವಾಗಿರುವುದರಿಂದ ಅದು **ಕರಣ**. ತಮ್ಮ ಎಂಬುದು ಕೊಡಲಾಗುವ ವಸ್ತುವನ್ನು (ಇಲ್ಲಿ, ಅನ್ನ) ಸ್ವೀಕರಿಸುವ ಪಾತ್ರವಾದ್ದರಿಂದ ಅದು **ಸಂಪ್ರದಾನ**. ಮರವು ಅಗಲುವಿಕೆಯ ಆರಂಭಸ್ಥಾನವಾದ್ದರಿಂದ ಅದು **ಅಪಾದಾನ**. ಮನೆ ಊಟಿಸುವ ಕ್ರಿಯೆ ನಡೆಯುವ ಸ್ಥಾನವನ್ನು ಸೂಚಿಸುವುದರಿಂದ ಅದು **ಅಧಿಕರಣ**. ಹೀಗೆ ಆರು ಕಾರಕಗಳ ಅರ್ಥಗಳನ್ನು ಸ್ಥೂಲವಾಗಿ ಅರಿಯಬೇಕು. ಸೂಕ್ಷ್ಮದಲ್ಲಿ ನೋಡಿದಾಗ ಇವುಗಳಿಗೂ, ವಿಭಕ್ತಿಗಳು ಬರುವ ಸ್ಥಳಗಳಿಗೂ ವಿಶೇಷವಾದ ಪ್ರಯೋಗಗಳುಂಟು. ಕಾರಕಗಳಲ್ಲಿ ಷಷ್ಠೀ ವಿಭಕ್ತಿ ಸೇರಿಲ್ಲವೆಂಬುದನ್ನು ಗಮನಿಸಬೇಕು. ಷಷ್ಠೀಯುಕ್ತ ಪದದ ಸಂಬಂಧ ಅದರ ಮುಂದೆ ಬರುವ ಪದದೊಡನೆ ಇರುತ್ತದೆಯೇ ಹೊರತು ಕ್ರಿಯಾಪದದೊಡನೆ ಇಲ್ಲ. ಆದುದರಿಂದ ಅದು ಇಲ್ಲಿ ಸೇರಿಲ್ಲ. ಮೇಲಿನ ಉದಾಹರಣೆಗಳಲ್ಲಿ ಮಲ್ಲನ ಮಗ, ಕಲ್ಲನ ತಮ್ಮ ರಾಮನ ತಂಗಿ ಪದಗಳಲ್ಲಿ ಮೇಲೆ ವಿವರಿಸಿದ ತತ್ವವನ್ನು ನೋಡಬಹುದು. ಕಾರಕಗಳು ಮುಖ್ಯ ಕ್ರಿಯಾಪದಕ್ಕೇ ಸಂಬಂಧಿಸಿರುತ್ತವೆ ಎಂದೇನಲ್ಲ. ಒಂದು ವಾಕ್ಯದಲ್ಲಿ ಒಂದು ಅಥವಾ ಹೆಚ್ಚು ಅಪೂರ್ಣ ಕ್ರಿಯಾಪದಗಳಿದ್ದರೆ, ಅವುಗಳಿಗೂ ಸಂಬಂಧಿಸಿ ಕಾರಕಗಳು ಬರಬಲ್ಲವು. ಉದಾಹರಣೆಗೆ ರಾಮನು ಮನೆಯಿಂದ ಬೇಗ ಬಂದರೆ ಲಕ್ಷ್ಮಣನು ಹೊಲಕ್ಕೆ ಹೋಗುತ್ತಾನೆ. ಇಲ್ಲಿ ಬಂದರೆ ಎಂಬ ಅಪೂರ್ಣ ಕ್ರಿಯಾಪದದ ಕರ್ತೃ ರಾಮ, ಅಪಾದಾನ ಮನೆ. ಆದರೆ ಹೋಗುತ್ತಾನೆ ಎಂಬ ಪೂರ್ಣಕ್ರಿಯಾ ಪದಕ್ಕೆ ಲಕ್ಷ್ಮಣ ಕರ್ತೃ ಇತ್ಯಾದಿ.

ಸರಳ ವಾಕ್ಯಗಳಲ್ಲಿಯ ಪ್ರಮುಖ ಪ್ರಕಾರಗಳನ್ನು ನೋಡೋಣ.

## 4.3.1 ಕರ್ತೃ ಪ್ರಧಾನ ವಾಕ್ಯ

ಈ ಪ್ರಕಾರದ ವಾಕ್ಯಗಳು ತುಂಬಾ ಪ್ರಚಲಿತವಿವೆ. ಇಂಥ ಸರಳ ವಾಕ್ಯದಲ್ಲಿ ಕನಿಷ್ಠ ಒಂದು ಕರ್ತೃವೂ ಒಂದು ಕ್ರಿಯಾಪದವೂ ಇರುತ್ತವೆ. ಅವುಗಳ ಪೂರಕ ಪದಗಳಾದ ಬೇರೆ ಕಾರಕಗಳನ್ನು ಹೇಳುವ ಪದಗಳೂ, ಅವ್ಯಯಗಳೂ ಇರಬಹುದು. ಮೇಲೆ ಹೇಳಿದ ಮಗು ಮಲಗುತ್ತದೆ ಎಂಬ ವಾಕ್ಯ ಇಂಥ ಪ್ರಕಾರಕ್ಕೆ ಉದಾಹರಣೆ. ಮಗು ತೊಟ್ಟಿಲಲ್ಲಿ ಮಲಗುತ್ತದೆ, ಮಗು ತೊಟ್ಟಿಲಲ್ಲಿ ಬೇಗ ಮಲಗುತ್ತದೆ. ಹೀಗೆ ವಿಸ್ತಾರಗೊಂಡರೂ ಕೂಡ ಮೂಲ ಭೂತವಾದ ಸರಳ ವಾಕ್ಯದ ಚೌಕಟ್ಟಿಗೆ ಬಾಧೆ ಇಲ್ಲ. ಮಲಗುತ್ತದೆ ಮಗು ಎಂದು ಶಬ್ದಗಳನ್ನು ಆಚೀಚೆ ಮಾಡಿದರೂ ಕರ್ತೃ - ಕ್ರಿಯೆ ಸಂಬಂಧದಲ್ಲಿ ವ್ಯತ್ಯಾಸ ಬರುವುದಿಲ್ಲ.

## 4.3.2 ಸಮೀಕರಣಾತ್ಮಕ ವಾಕ್ಯ

ಇಂಥ ವಾಕ್ಯಗಳಲ್ಲಿ ಕ್ರಿಯಾಪದ ಇರುವುದಿಲ್ಲ. ಒಂದು ಪದಕ್ಕೂ ಇನ್ನೊಂದು ಪದಕ್ಕೂ ಒಂದು ರೀತಿಯ ಸಮೀಕರಣವಿರುತ್ತದೆ. ಕರ್ತೃ - ಕ್ರಿಯಾಪದ ವಾಕ್ಯದಲ್ಲಿ ಕ್ರಿಯೆಯನ್ನು ಮಾಡುವವನು ಅಥವಾ ಮಾಡುವಂಥದು ಎಂಬ ಅರ್ಥ ಬರುವಂತೆ ಇರುತ್ತದೆ. ಆದರೆ ಇಲ್ಲಿ ಹೀಗಿರದೆ ಸಮೀಕರಣವಿರುತ್ತದೆ. ಅದು ಪುಸ್ತಕ. ಪುಸ್ತಕ ಅದು ಈ ವಾಕ್ಯಗಳಲ್ಲಿ ವ್ಯತ್ಯಾಸವೇನೂ ಇಲ್ಲ. ರಾಮ ಒಳ್ಳೆಯವನು, ಒಳ್ಳೆಯವನು ರಾಮ ಇಲ್ಲೂ ಅಷ್ಟೇ. ಸರ್ವನಾಮ - ನಾಮ ಅಥವಾ ನಾಮ - ವಿಶೇಷಣಗಳಿಂದ ಇಂಥ ವಾಕ್ಯಗಳು ರಚನೆಯಾಗುತ್ತವೆ.

## 4.3.3 ಚತುರ್ಥೀ ಕರ್ತೃಕ ವಾಕ್ಯ

ಇಂಥ ವಾಕ್ಯಗಳಲ್ಲಿ ಕರ್ತೃವಿನ ಸ್ಥಳವನ್ನು ಪಡೆದ ಪದ ಚತುರ್ಥೀ ವಿಭಕ್ತಿಯಲ್ಲಿರುತ್ತದೆ. ಉದಾಹರಣೆಗೆ ನನಗೆ ಹಾಲು ಬೇಕು. ಇಲ್ಲಿ ಹಾಲನ್ನು ಬಯಸುವವನು ಅಥವಾ ಬಯಸಿದವನು ನಾನು. ಆದ್ದರಿಂದ ಸಂದರ್ಭದಲ್ಲಿ ನಾನು ಎಂಬುದು ಈ ವಾಕ್ಯದ ಕರ್ತೃ ಅದು ಚಬತುರ್ಥೀವಿಭಕ್ತಿಯಲ್ಲಿದೆ. ಆದರೆ ಇದೇ ವಾಕ್ಯವನ್ನು ಕರ್ತೃ-ಕ್ರಿಯಾ ವಾಕ್ಯದಲ್ಲಿ ಅಂದರೆ ನಾನು ಹಾಲನ್ನು ಬೇಡುತ್ತೇನೆ ಎಂದು ಹೇಳಲಾಗದು. ವಾಕ್ಯದ ಅರ್ಥವೇ ಬೇರೆಯಾಗುತ್ತದೆ. ಇದೇ ರೀತಿ ನನಗೆ ಹಸಿವಾಗಿದೆ; ಅವನಿಗೆ ಏನೋ ಬೇಕಾಗಿದೆ. ಗೋಪಿಗೆ ಹುಚ್ಚು ಹಿಡಿದಿದೆ. ರಾಮನಿಗೆ ಈಗ ಹೋಗಬೇಕಾಗಿದೆ - ಮೊದಲಾದ ವಾಕ್ಯಗಳನ್ನು ನೋಡಬಹುದು.

# ಅಭ್ಯಾಸ - 1

(ಅ) ಕೆಳಗಿನ ವಾಕ್ಯಗಳಲ್ಲಿ ಸರಳ ವಾಕ್ಯಗಳನ್ನೂ ಮತ್ತು ಇತರ ವಾಕ್ಯಗಳನ್ನೂ ವಿಂಗಡಿಸಿರಿ.
ದೊಡ್ಡ ಮರದಿಂದ ಬಿದ್ದ ಹಣ್ಣು ರುಚಿಯಾಗಿತ್ತು ( )
ಶಾರದಾ ಶಾಲೆಗೆ ಬೇಗ ಬಂದು ಬೇಗ ಹೋದಳು. ( )
ಯಾವುದು ಹಿತಕರವೋ ಅದು ಯಾವಾಗಲೂ ರುಚಿಸುವುದಿಲ್ಲ. ( )
ದೊಡ್ಡ ಮನೆ ಇಸ್ಟೇಟ್ ಎಂಬುದು ಒಂದು ಕಾದಂಬರಿ. ( )

(ಆ) ಕೆಳಗಿನ ವಾಕ್ಯಗಳಲ್ಲಿ ದಪ್ಪಕ್ಷರಗಳಿಂದ ಗುರುತಿಸಿದ ಪದಗಳ ಕಾರಕವನ್ನು ಸೂಚಿಸಿರಿ.
**ಕೋತಿಯ** ಆಟ **ಮರದಲ್ಲಿ** ( )
**ಹುಲಿಯಿಂದ** ಭಯವೇ ಹೊರತು ನರಿಯಿಂದಲ್ಲ ( )
ಬಸವ ಜಂಗಮರಿಗೆ ದಾಸೋಹ ಮಾಡುತ್ತಿದ್ದ ( )
ರಾಮಾ! ನೀನು ಯಾವಾಗ ಬಂದೆ? ( )
**ಅವನು** ಸುಲಭದ ಕೆಲಸವನ್ನು ಒಲ್ಲ ( )
**ಯಾರಿಂದ** ಈ ಕೆಲಸ ಆಗಬಹುದು? ( )

(ಇ) ಕೆಳಗಿನ ವಾಕ್ಯಗಳು ಯಾವ ಪ್ರಕಾರದವು ಎಂದು ಗುರುತಿಸಿರಿ.
ಇದು ಭಾರತ ದೇಶ ( )
ಯಾರಿಗೆ ಇದರ ಬಯಕೆ ಆಗಿದೆ? ( )
ಹುಡುಗ ಶಾಲೆಗೆ ಹೋಗಲಿಲ್ಲ ( )
ಅದಕ್ಕೆ ಹಾಲು ಯಾವಾಗಲೂ ಬೇಡ ( )
ಅಲ್ಲಮಪ್ರಭು ಒಬ್ಬ ದೊಡ್ಡ ಅನುಭಾವಿ ( )
ನಾನು ನಿನ್ನೆಯೇ ಬಂದೆ ( )

(ಈ) ಕೆಳಗಿನ ವಾಕ್ಯಗಳನ್ನು ಯೋಗ್ಯ ಪದಗಳಿಂದ ತುಂಬಿರಿ.
ಕ್ರಿಕೆಟ್ ..................ಅತ್ಯಂತ ಜನಪ್ರಿಯ ಆಟ. (ಅಧಿಕರಣ)
.............ಚಿಲಕ ಹಾಕಿದ. (ಕರಣ)
ಬಂಗಾರವನ್ನು ..................ಆಭರಣ ಮಾಡಲು ಕೊಟ್ಟೆ. (ಸಂಪ್ರದಾನ)
ಮಾರುತಿ ಅಶೋಕ ವನದಲ್ಲಿ ................ಮರಕ್ಕೆ ಹಾರಿದ. (ಅಪಾದಾನ)
ಯಾವುದೇ ...............ಬೇಗ ಮಾಡಿದಷ್ಟು ಚೆನ್ನ. (ಕರ್ಮ)

## 4.3.4 ಕರ್ಮ ಪ್ರಧಾನ ವಾಕ್ಯ

ಹಿಂದೆ 4.3.1 ರಲ್ಲಿ ನೋಡಿದ ಕರ್ತೃ ಪ್ರಧಾನ ವಾಕ್ಯದಲ್ಲಿ ಕರ್ಮವಿದ್ದರೂ ಕರ್ತೃವಿಗೆ ಪ್ರಾಧಾನ್ಯವಿರುತ್ತದೆ. ಅಂದರೆ ಯಾವ ಪದವನ್ನೂ ಒತ್ತಿ ಹೇಳದೆ ಇದ್ದರೆ, ಅಲ್ಲಿ ಕರ್ತೃವೇ ಪ್ರಧಾನವಾಗಿರುತ್ತದೆ.
ಗೋಪಾಲ ಮಾವಿನ ಹಣ್ಣು ತಿನ್ನುತ್ತಾನೆ.

ಇಲ್ಲಿ ಗೋಪಾಲನ ಬಗ್ಗೆ ವಿಷಯ ಹೇಳಿದ್ದು ತಿಳಿದು ಬರುತ್ತದೆ. ಆದರೆ ಕರ್ಮವನ್ನು ಪ್ರಧಾನ ಮಾಡಬೇಕಾದಾಗ ಎರಡು ವಿಧಾನಗಳಿವೆ. ಮಾವಿನ ಹಣ್ಣು ಎಂಬ ಪದವನ್ನು ಒತ್ತಿ ಹೇಳುವುದು ಒಂದು ವಿಧ. ಅಂದರೆ ಗೋಪಾಲ ಏನನ್ನು ತಿನ್ನುತ್ತಾನೆ? ಎಂಬ ಪ್ರಶ್ನೆಗೆ ಉತ್ತರವಾಗಿ ಬರುವ ವಾಕ್ಯ. ಇನ್ನೊಂದು ಪ್ರಯೋಗವನ್ನೇ ಬದಲಿಸುವುದು.
ಮಾವಿನ ಹಣ್ಣು ಗೋಪಾಲನಿಂದ ತಿನ್ನಲ್ಪಡುತ್ತದೆ.
ಇದೇರೀತಿ: ಈ ಶಾಲೆಯು ನಿನ್ನೆ ಸಂದರ್ಶಿಸಲ್ಪಟ್ಟಿತು.
ನೀನು ಹೇಳಿದ ಲೆಕ್ಕ ಯಾರಿಂದಲೂ ಬಿಡಿಸಲ್ಪಡಲಿಲ್ಲ.

ಇಂಥ ವಾಕ್ಯಗಳಲ್ಲಿ ಕರ್ಮವು ಪ್ರಥಮೆಯಲ್ಲಿದ್ದು ಕರ್ತೃ ತೃತೀಯೆಯಲ್ಲಿ ಇರುತ್ತದೆ ಎಂಬುದನ್ನು ಗಮನಿಸಬೇಕು. ಇವುಗಳಿಗೆ **ಕರ್ಮಣಿ** ಪ್ರಯೋಗವೆನ್ನುತ್ತಾರೆ.

ಮೇಲೆ ತೋರಿಸಿದ ಪಡು ಸಹಾಯಕ ಕ್ರಿಯೊಡನೆ ಬಂದ ಕರ್ಮಣಿ ಪ್ರಯೋಗಗಳಲ್ಲದೆ ಇನ್ನೂ ಕೆಲವು ಪ್ರಕಾರದ ಕರ್ಮಣಿ ಪ್ರಯೋಗಗಳಿವೆ.
ಅವು - ಆಗು ಸಹಾಯಕ ಕ್ರಿಯೆಯನ್ನು ಪಡೆದಿರುತ್ತವೆ.
ಈ ಶಾಲೆಯನ್ನು ನಿನ್ನೆ ಸಂದರ್ಶಿಸಲಾಯಿತು.
ಚಿತ್ರಮಯವಾಗಿ ಪರ್ಣಶಾಲೆ ಕಟ್ಟಲಾಯಿತು.

'ಪಡು' ವಿನೊಡನೆ ಬಂದ ಕರ್ಮಣಿ ಪ್ರಯೋಗದಲ್ಲಿ ಕರ್ತೃವಿನ ಅಪೇಕ್ಷೆ ಇರುತ್ತದೆ. ಅಂದರೆ 'ಯಾರಿಂದ'? ಎಂಬ ಪ್ರಶ್ನೆ ಮನಸ್ಸಿನಲ್ಲಿ ಉಳಿಯುತ್ತದೆ. ಆದರೆ 'ಆಗು'ವಿನೊಡನೆ ಬಂದ ಕರ್ಮಣಿಯಲ್ಲಿ ಕರ್ತೃವಿನ ಅಪೇಕ್ಷೆ ಇರುವುದಿಲ್ಲ. 'ಯಾರಿಂದ' ಎಂಬುದು ಅಪ್ರಸ್ತುತ ಪ್ರಶ್ನೆ ಎನಿಸುತ್ತದೆ. ಆಗು. ಕರ್ಮಣಿಯ ಸಂಕ್ಷಿಪ್ತ ರೂಪಗಳೂ ಆಗೀಗ ಬಂದಿವೆ.
ಚಿತ್ರಮಯವಾಗಿ ಕಟ್ಟಿತು ಪರ್ಣಶಾಲೆ.
ನಿನ್ನೆಯೇ ಆ ಪತ್ರ ಬರೆಯಿತು.

## 4.3.5 ನಿಷೇಧ ವಾಕ್ಯ

ನಿಷೇಧದಲ್ಲಿ ಎರಡು ಪ್ರಕಾರಗಳಿವೆ. ಒಂದು ಗುಣವನ್ನು ಅಲ್ಲಗಳೆಯುವುದು. ಇನ್ನೊಂದು ಕ್ರಿಯೆಯನ್ನು ಅಲ್ಲಗಳೆಯುವುದು. ಮೊದಲನೆಯ ಪ್ರಕಾರದಲ್ಲಿ 'ಅಲ್ಲ'ವೂ ಎರಡನೆಯ ಪ್ರಕಾರದಲ್ಲಿ 'ಇಲ್ಲ'ವೂ ಬರುತ್ತದೆ. ಉದಾಹರಣೆಗೆ

ಇದು ಭಾರತ ದೇಶ ಅಲ್ಲ.
ರಾಮನು ಬುದ್ಧಿವಂತ ಅಲ್ಲ.
ಗೋವಿಂದನು ಮನೆಯಲ್ಲಿ ಇಲ್ಲ.

ಇಲ್ಲಿ 'ಅಲ್ಲ' ಎಂಬುದು ಸಮೀಕರಣಾತ್ಮಕ ವಾಕ್ಯಗಳ (ನೋಡಿ 4.3.2) ನಿಷೇಧ ಪರಿವರ್ತನೆಯಲ್ಲಿ ಬಂದರೆ 'ಇಲ್ಲ' ಎಂಬುದು ಉಳಿದ ಎಲ್ಲ ಪ್ರಕಾರದ ವಾಕ್ಯಗಳ ನಿಷೇಧ ಪರಿವರ್ತನೆಯಲ್ಲಿ ಬರುತ್ತದೆ.

ಮಗು ತೊಟ್ಟಿಲಲ್ಲಿ ಮಲಗುವುದಿಲ್ಲ.
ನನಗೆ ಹಾಲು ಬೇಕಿಲ್ಲ.
ಗೋಪಿಗೆ ಹುಚ್ಚು ಹಿಡಿದಿಲ್ಲ.
ಈ ಶಾಲೆಯನ್ನು ನಿನ್ನೆ ಸಂದರ್ಶಿಸಲಾಗಲಿಲ್ಲ.
ಗೋಪಾಲನಿಂದ ಹಣ್ಣು ತಿನ್ನಲ್ಪಡಲಿಲ್ಲ.

ಇಲ್ಲಿ ಒಂದು ಮಾತನ್ನು ಗಮನಿಸಬೇಕು. ವರ್ತಮಾನಕಾಲ, ಭವಿಷ್ಯತ್ಕಾಲಗಳ ನಿಷೇಧದಲ್ಲಿ ಭವಿಷ್ಯತ್ಕಾಲದ ರೂಪಕ್ಕೆ ಇಲ್ಲ ಸೇರುತ್ತದೆ 'ಬರುತ್ತಾರೆ' ಅಥವಾ 'ಬರುವುದು'—ಇದರ ನಿಷೇದ 'ಬರುವುದಿಲ್ಲ'. ಆದರೆ ಭೂತಕಾಲದ ಕ್ರಿಯಾ ಪದಗಳಿಗೆ -ಅಲುವಿನ ಮೇಲೆ ಇಲ್ಲ ಸೇರುತ್ತದೆ.

ಹೋದನು — ಹೋಗಲು + ಇಲ್ಲ, ಹೋಗಲಿಲ್ಲ.
ಬಂದಳು — ಬರಲು +ಇಲ್ಲ, ಬರಲಿಲ್ಲ.
ಬಂದಿತು —ಬರಲು + ಇಲ್ಲ, ಬರಲಿಲ್ಲ.

ಆದರೆ ನಿಷೇಧ ಕ್ರಿಯಾಪದಗಳು ಎಲ್ಲ ಸರ್ವನಾಮಗಳಿಗೂ ಒಂದೇ ಪ್ರಕಾರವಿರುತ್ತವೆ ಎಂಬುದನ್ನು ಗಮನಿಸಬೇಕು.

## ಅಭ್ಯಾಸ - 2

(ಅ) ಕೆಳಗಿನ ವಾಕ್ಯಗಳನ್ನು ಕರ್ಮ ಪ್ರಧಾನ ವಾಕ್ಯಗಳಾಗಿ ಬದಲಾಯಿಸಿ ಬರೆಯಿರಿ.
ಹೂವು ದುಂಬಿಗೆ ಆಹ್ವಾನ ಕೊಡುತ್ತದೆ. ತಲೆಯಲ್ಲಿದ್ದ ವಿಚಾರವನ್ನು ಬಾಯಿ ನುಡಿಯಲಿಲ್ಲ. ........
ಮನುಷ್ಯನೇ ಮನುಷ್ಯನನ್ನು ಕೊಲ್ಲುತ್ತಾನೆ. ........................................................................
ಇದು ಯಾವ ರೀತಿ ಎಂಬ ಪ್ರಶ್ನೆಯನ್ನು ಕೇಳಬಾರದು. ........................................................

(ಆ) ಕೆಳಗಿನ ವಾಕ್ಯಗಳಿಗೆ ನಿಷೇಧ ರೂಪ ಬರೆಯಿರಿ.
ಮರದಿಂದ ಮರಕ್ಕೆ ಭಿನ್ನತೆ ಇದೆ. ......................................................................
ಅದಕ್ಕೂ ಇದಕ್ಕೂ ಎಷ್ಟು ಅಂತರವಿದೆ? ........................................................
ಅವನು ಅಹಂಕಾರಿ. ..........................................................................................
ಪರೀಕ್ಷೆ ಮುಂದೆ ಹಾಕಲಾಗಿದೆ. ......................................................................

## 4.4 ಮಿಶ್ರ ವಾಕ್ಯ

ಮಿಶ್ರ ವಾಕ್ಯದಲ್ಲಿ ಮುಖ್ಯ ಕ್ರಿಯಾಪದಗಳನ್ನು ಅನೇಕ ವಾಕ್ಯಗಳನ್ನು ಸೇರಿಸಲಾಗಿರುತ್ತದೆ. ಯಾವ ರೀತಿ ಅವು ಸೇರಿಸಲ್ಪಟ್ಟಿವೆ ಎಂಬುದರ ಮೇಲಿಂದ ಮಿಶ್ರ ವಾಕ್ಯದ ಸ್ವರೂಪ ನಿರ್ಣಯವಾಗುತ್ತದೆ. ಈ ಪ್ರಕಾರ ಏಳು ಪ್ರಮುಖ ರೀತಿಯ ಮಿಶ್ರ ವಾಕ್ಯಗಳನ್ನು ಗುರುತಿಸಲಾಗಿದೆ.

1. ಸಮುಚ್ಚಯ 2. ವಿಕಲ್ಪ 3. ವಿರುದ್ಧಾರ್ಥಕ 4. ಕಾರ್ಯಕಾರಣ ಸಂಬಂಧಿ 5. ವಿವರಣಾತ್ಮಕ 6. ವಿಕಲ್ಪಾರ್ಥಕ 7. ಉದ್ಧರಣಾತ್ಮಕ.
ಇವುಗಳನ್ನು ಒಂದೊಂದಾಗಿ ನೋಡೋಣ.

### 4.4.1 ಸಮುಚ್ಚಯ

ಎರಡು ಅಥವಾ ಹೆಚ್ಚು ಪದಗಳನ್ನು ಒಂದೇ ವಾಕ್ಯದಲ್ಲಿ ಸಮುಚ್ಚಯ ಅವ್ಯಯಗಳಾದ **ಮತ್ತು, ಹಾಗೂ ಅಥವಾ ಅರ್ಧವಿರಾಮ** ಗಳಿಂದ ಒಂದು ಗೂಡಿಸಿದಂತೆ ಎರಡು ವಾಕ್ಯಗಳನ್ನೂ **ಮತ್ತು, ಹಾಗೂ, ಅರ್ಧವಿರಾಮ**ಗಳಿಂದ ಕೂಡಿಸಬಹುದು. ಹೇಗೆಂದರೆ

ಹಕ್ಕಿಗಳು ತಮ್ಮ ಗೂಡುಗಳಿಗೆ ಮರಳಿದವು ಮತ್ತು ರೈತ ಮನೆಯತ್ತ ಸಾಗಿದ.
ಗೋವಿಂದ ರಾಮನಿಗೆ ಐದು ರೂಪಾಯಿ ಕೊಟ್ಟ ಹಾಗೂ ಕೂಡಲೇ ಅದನ್ನು ಹಿಂದಕ್ಕೆ ಪಡೆದ.
ನದಿಯಲ್ಲಿ ಕೆಲವರು ಈಜುತ್ತಿದ್ದರು, ಕೆಲವರು ನೋಡುತ್ತಿದ್ದರು.

ಇಲ್ಲಿ ಮೊದಲನೆಯ ಮಿಶ್ರ ವಾಕ್ಯದಲ್ಲಿ ಅಡಕವಾದ ಎರಡೂ ವಾಕ್ಯಗಳ ಕರ್ತೃಗಳು ಬೇರೆ ಬೇರೆಯಾಗಿವೆ. ಅಂದರೆ ಮೊದಲನೆಯ ಕರ್ತೃ ಹಕ್ಕಿಗಳು ಎರಡನೆಯದರ ಕರ್ತೃ ರೈತ. ಆದರೆ ಎರಡನೆಯ ಮಿಶ್ರ ವಾಕ್ಯದಲ್ಲಿ ಎರಡೂ ವಾಕ್ಯಗಳ ಕರ್ತೃ ಒಂದೇ ಆಗಿದೆ ಅದು 'ಗೋವಿಂದ' ಇಂಥ ಮಿಶ್ರ ವಾಕ್ಯಗಳಲ್ಲಿ ಕೇವಲ ಎರಡು ಘಟನೆಗಳು ಒಟ್ಟಾಗಿ ನಡೆದವು ಎಂಬ ಬಗ್ಗೆ ಹೇಳಿಕೆ ಇರುತ್ತದೆ ಎಂಬುದನ್ನು ಗಮನಿಸಬೇಕು.

### 4.4.2 ವಿಕಲ್ಪ

ಎರಡರಲ್ಲೊಂದು ಎಂಬುದನ್ನು ಸೂಚಿಸಲು ಪದಗಳ ಮಧ್ಯೆ **ಅಥವಾ** ಬರುವಂತೆ ಎರಡು ವಾಕ್ಯಗಳ ಅರ್ಥಗಳಲ್ಲಿ ಯಾವುದಾದರೊಂದು ಎಂಬ ಸೂಚನೆ ಇರುವಾಗ ಅಲ್ಲೂ **ಅಥವಾ** ಪ್ರಯೋಗವಾಗುತ್ತದೆ. ಹೇಗಂದರೆ:

ಮಳೆ ಬರಬಹುದು ಅಥವಾ ಬಿಸಿಲು ಕಾಯಬಹುದು.
ಬಸ್ಸು ಸರಿಯಾದ ಸಮಯಕ್ಕೆ ಬರುತ್ತದೆ ಅಥವಾ ಬರುವುದೇ ಇಲ್ಲ.
ವಿದ್ಯಾರ್ಥಿಗಳು ಉತ್ತರ ಹೇಳುತ್ತಾರೆ ಅಥವಾ ಶಿಕ್ಷಕರೇ ಹೇಳಿಬಿಡುತ್ತಾರೆ.

ಇಲ್ಲಿಯೂ ಒಂದನೆಯ ವಾಕ್ಯದಲ್ಲಿಯ ಎರಡೂ ವಾಕ್ಯಗಳ ಕರ್ತೃಗಳು ಭಿನ್ನವಾಗಿವೆ. ಒಂದರ ಕರ್ತೃ ಮಳೆಯಾದರೆ ಇನ್ನೊಂದರದು ಬಿಸಿಲು. ಆದರೆ ಎರಡನೆಯ ವಾಕ್ಯದಲ್ಲಿ ಎರಡೂ ವಾಕ್ಯದ ಕರ್ತೃ ಒಂದೇ - ಬಸ್ಸು ಒಂದನೆಯ ವಾಕ್ಯದ ಕ್ರಿಯೆ ನಡೆಯದೆ ಇದ್ದರೆ ಎರಡನೆ ವಾಕ್ಯದ ಕ್ರಿಯೆ ನಡದೇ ನಡೆಯುತ್ತದೆ ಎಂಬ ಸೂಚನೆ ಇದೆ. ಮೂರನೆಯದಲ್ಲಿ ಒಂದನೆಯ ವಾಕ್ಯದಲ್ಲಿಯ ಕ್ರಿಯೆ ನಡೆಯುವ ಮೊದಲು ಎರಡನೆ ವಾಕ್ಯದ ಕ್ರಿಯೆ ನಡೆಯುತ್ತದೆ ಎಂಬ ಸೂಚನೆ ಇದೆ. ಹೀಗೆ ವಿಕಲ್ಪದಲ್ಲಿ ಅರ್ಥದ ಅನೇಕ ಪರಿಗಳು ಹುಟ್ಟಲು ಅವಕಾಶವಿದೆ.

### 4.4.3 ವಿರುದ್ಧಾರ್ಥಕ

ಒಂದು ವಾಕ್ಯದಲ್ಲಿಯ ಅರ್ಥಕ್ಕೆ ವಿರುದ್ಧವಾದ ಅಥವಾ ವ್ಯತಿರಿಕ್ತವಾದ ಅರ್ಥವನ್ನು ಹೇಳುವಾಗ ವಾಕ್ಯಗಳನ್ನು **ಆದರೆ, ಆದರೂ, ಇದ್ದರೂ,** ಮೊದಲಾದ ಅವ್ಯಯಗಳಿಂದ ಜೋಡಿಸಲಾಗುತ್ತದೆ. ಅಂಥ ವಾಕ್ಯಗಳಿಗೆ ವಿರುದ್ಧಾರ್ಥಕ ವಾಕ್ಯವೆನ್ನುತ್ತಾರೆ. ಹೇಗೆಂದರೆ

ರೈಲು ಬಂತು ಆದರೆ ನಮ್ಮ ಅತಿಥಿಗಳು ಬರಲಿಲ್ಲ.
ಮಳೆ ಬಂತು ಆದರೆ ದುರ್ಬಲವಾಗಿತ್ತು.
ಅವನು ಒಪ್ಪುವುದಿಲ್ಲ ಆದರೂ ಒಮ್ಮೆ ಹೇಳಿ ನೋಡಬಹುದು.
ಚಿತ್ರ ಸಣ್ಣದಾಗಿದ್ದರೂ ಸುಂದರವಾಗಿದೆ.

ಈ ವಾಕ್ಯಗಳಲ್ಲಿ ಎರಡೂ ಭಾಗಗಳ ಕರ್ತೃಗಳು ಭಿನ್ನ ಭಿನ್ನವಾಗಿರಬಹುದು ಅಥವಾ ಒಂದೇ ಆಗಿರಲೂ ಬಹುದು. ಭಿನ್ನವಾಗಿದ್ದಾಗ ಕ್ರಿಯೆಯಲ್ಲಿ ವಿರುದ್ಧ ವ್ಯಾಪಾರ ತೋರಿ ಬರುತ್ತದೆ. ಆದರೆ ಒಂದೇ ಕರ್ತೃವಿದ್ದಾಗ ಕರ್ತೃವಿನ ಬಗ್ಗೆ ಹೆಚ್ಚಿನ ಮಾಹಿತಿ ಪೂರೈಕೆಯಾಗುತ್ತಿರುತ್ತದೆ.

### 4.4.4 ಕಾರ್ಯಕಾರಣ

ಒಂದು ವಾಕ್ಯದಲ್ಲಿಯ ಅರ್ಥವು ಇನ್ನೊಂದರ ಕಾರಣವಾಗಿದ್ದರೆ, ಅಥವಾ ಪರಿಣಾಮವಾಗಿದ್ದರೆ **ಆದ್ದರಿಂದ** ಅಥವಾ **ಯಾಕೆಂದರೆ** ಅವ್ಯಯಗಳು ಪ್ರಯೋಗವಾಗುತ್ತವೆ. ಆದರೆ ಇಲ್ಲಿ ಒಂದು ಮಾತನ್ನು ಲಕ್ಷಿಸಬೇಕು. **ಆದ್ದರಿಂದ** ಅಥವಾ **ಆದಕಾರಣ** ಪ್ರಯೋಗದಲ್ಲಿ ಅದರ ಹಿಂದೆ ಮುಂದೆ ಇದ್ದ ವಾಕ್ಯಗಳು, **ಯಾಕೆಂದರೆ** ಪ್ರಯೋಗವಾದಾಗ ಅದಲು ಬದಲಾಗುತ್ತದೆ. ಹೇಗೆಂದರೆ :

1. ಮಳೆ ಬಂದಿದೆ ಆದ್ದರಿಂದ ನೆಲ ತೊಯ್ದಿದೆ.
   ನೆಲ ತೊಯ್ದಿದೆ ಯಾಕೆಂದರೆ ಮಳೆ ಬಂದಿದೆ.

2. ರಾಮಯ್ಯ ತಡವಾಗಿ ಬಂದ ಆದ್ದರಿಂದ ಅವನಿಗೆ ರೈಲು ತಪ್ಪಿತು.
   ರಾಮಯ್ಯನಿಗೆ ರೈಲು ತಪ್ಪಿತು ಯಾಕೆಂದರೆ ಅವನು ತಡವಾಗಿ ಬಂದ.

ಅಷ್ಟು ಹೊತ್ತಿಗೆ ನಾನು ತೊಯಿಸಿಕೊಂಡು ಬಿಟ್ಟಿದ್ದೆ ಆದಕಾರಣ
   ಕೊಡೆ ಏರಿಸಲಿಲ್ಲ.
   ನಾನು ಕೊಡೆ ಏರಿಸಲಿಲ್ಲ ಯಾಕೆಂದರೆ ಅಷ್ಟು ಹೊತ್ತಿಗೆ ನಾನು ತೊಯಿಸಿಕೊಂಡು ಬಿಟ್ಟಿದ್ದೆ.

ಇಲ್ಲಿ ಮೂರು ಗುಂಪುಗಳಲ್ಲಿ **ಆದ್ದರಿಂದ** ಮತ್ತು **ಯಾಕೆಂದರೆ** ಗಳು ಹೇಗೆ ಪ್ರಯೋಗವಾಗುತ್ತವೆ ಎಂಬುದನ್ನು ತೋರಿಸಿದೆ. ಯಾವ ಅರ್ಥವನ್ನು ಪ್ರಮುಖವಾಗಿ ಹೇಳಬೇಕಾಗಿರುತ್ತದೋ ಆ ವಾಕ್ಯ ಮೊದಲು ಬರುತ್ತದೆ. ಮುಖ್ಯವಾಗಿ ಮಳೆ ಬಂದುದನ್ನು ಹೇಳಬೇಕಾಗಿದೆಯೋ, ನೆಲ ತೊಯ್ದುದನ್ನು ಹೇಳಬೇಕಾಗಿದೆಯೋ ಎಂಬುದನ್ನು ನಿರ್ಧರಿಸಬೇಕು. ಆ ಪ್ರಕಾರ ವಾಕ್ಯದ ರಚನೆಯನ್ನು ಸೂಕ್ತ ಸಂಬಂಧ ಸೂಚಕದೊಡನೆ ಆಯ್ದುಕೊಳ್ಳಬೇಕಾಗುತ್ತದೆ.

### 4.4.5 ವಿವರಣಾತ್ಮಕ

ಒಂದು ವಾಕ್ಯದ ವಿವರಣೆಯನ್ನು ಕೊಡಬೇಕಾದಾಗ, ಅಥವಾ ಅದಕ್ಕೆ ಉದಾಹರಣೆಯನ್ನು ಒದಗಿಸಬೇಕೆಂದಿದ್ದಾಗ, **ಹೇಗೆಂದರೆ** ಅಥವಾ **ಎಂತೆಂದರೆ** ಅವ್ಯಯಗಳು ಪ್ರಯೋಗವಾಗುತ್ತವೆ. ಉದಾಹರಣೆಗೆ :
ಮಾನವೇತರ ನಾಮಗಳ ಮೇಲೆ ಚತುರ್ಥಿಯಲ್ಲಿ - ಕ್ಕೆ ಬರುತ್ತದೆ, ಹೇಗೆಂದರೆ ಹೊಲಕ್ಕೆ.

ಕಲ್ಲಯ್ಯನು ಹತ್ತೇ ನಿಮಿಷದಲ್ಲಿ ಪೇಟೆಗೆ ಹೋಗಿ ಬಂದ, ಹೇಗೆಂದರೆ ಅವನು ಸೈಕಲ್ಲಿನ ಮೇಲೆ ಹೋಗಿ ಬಂದ.

ಈ ವಾಕ್ಯದಲ್ಲಿ **ಹೇಗೆಂದರೆ** ನಂತರ ಬರುವವುಗಳು ಯಾವಾಗಲೂ ವಾಕ್ಯವಾಗಿರುವುದಿಲ್ಲ. ಕೆಲವೊಮ್ಮೆ ಒಂದೆರಡು ಮಾತು ಹೆಚ್ಚು ಇರುತ್ತದೆ, ಅಷ್ಟೇ. ಆದುದರಿಂದ ಯಾವಾಗಲೂ ಈ ಪ್ರಕಾರದಲ್ಲಿ ಮಿಶ್ರವಾಕ್ಯ ಸಿಗುವುದು ಕಷ್ಟ.

### 4.4.6 ವಿಕಲ್ಪಾರ್ಥಕ

ವಿಕಲ್ಪಾರ್ಥಕ ವಾಕ್ಯಗಳಲ್ಲಿ ಒಂದು ವಾಕ್ಯದ ಅರ್ಥಕ್ಕೆ ಇರಬಹುದು, ಇರಲಿಕ್ಕಿಲ್ಲ ಎಂಬ ಎರಡೂ ಅರ್ಥಗಳು ಹೊರಡುವಂಥ ಪ್ರಯೋಗ ಜೋಡಣೆ ಸಾಧ್ಯ. ಆಗ **ಇಲ್ಲವೆ** ಪ್ರಯೋಗವಾಗುತ್ತದೆ. ಹೇಗೆಂದರೆ -

ನೀನು ಈ ಕೆಲಸ ಮಾಡು ಇಲ್ಲವೆ ನನಗಾದರೂ ಮಾಡಲು ಬಿಡು.
ಕಷ್ಟಪಟ್ಟು ದುಡಿಯಬೇಕು ಇಲ್ಲವೆ ಬಡತನದಲ್ಲಿ ತೊಳಲಾಡಬೇಕು.
ಸಹಾಯವನ್ನು ಕೇಂದ್ರ ಸರಕಾರವಾದರೂ ಕೊಡಬೇಕು ಇಲ್ಲವೆ ರಾಜ್ಯ ಸರಕಾರವಾದರೂ ಕೊಡಬೇಕು.

ಇಂಥ ವಾಕ್ಯಗಳಲ್ಲಿ **ಇಲ್ಲವೆ** ಯ ಮೊದಲಿನ ವಾಕ್ಯಕ್ಕೂ ನಂತರದ ವಾಕ್ಯಕ್ಕೂ ಕ್ರಿಯಾಪದ ಸಾಮ್ಯವಿದ್ದರೆ ಕರ್ತೃ ಭೇದವಿರುತ್ತದೆ. ಕರ್ತೃ ಮತ್ತು ಕ್ರಿಯಾಪದ ಎರಡೂ ಸಾಮ್ಯವಿರುವ ಅಥವಾ ಎರಡೂ ಭಿನ್ನವಾಗಿರುವ ವಾಕ್ಯಗಳು ವಿರಳ ಎಂಬುದನ್ನು ಗಮನಿಸಬೇಕು.

### 4.4.7 ಉದ್ಧರಣಾರ್ಥಕ

ಒಬ್ಬರು ಹೇಳಿದ ವಾಕ್ಯವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಉದ್ಧರಿಸಿ ಹೇಳುವ ವಾಕ್ಯಕ್ಕೆ ಉದ್ಧರಣಾರ್ಥಕ ವಾಕ್ಯವೆನ್ನುತ್ತಾರೆ. ಇಲ್ಲಿ ಎಂದು ಎಂಬ ಅವ್ಯಯ ಪ್ರಯೋಗವಾಗುತ್ತದೆ. ಉದ್ಧರಿಸಲ್ಪಟ್ಟ

ಇಷ್ಟೀ ವಾಕ್ಯವು ಎಂದು ನಂತರ ಬರುವ ವಾಕ್ಯಕ್ಕೆ ಕರ್ಮವಾಗಿ ನಡೆದುಕೊಳ್ಳುತ್ತದೆ. ಆದುದರಿಂದ ಎರಡನೆ ವಾಕ್ಯದಲ್ಲಿಯ ಕ್ರಿಯಾಪದ ಸಕರ್ಮಕ ಕ್ರಿಯೆಯಾಗಿರಬೇಕಾಗುತ್ತದೆ. ಉದಾಹರಣೆಗೆ :
ಬೇಗ ಬರುವೆನು ಎಂದು ಗಂಡ ಹೆಂಡತಿಗೆ ಹೇಳಿದ.
ಇದು ಯಾವ ಊರು ಎಂದು ಪ್ರವಾಸಿಗ ಕೇಳಿದ.
ಇದೇನಾಶ್ಚರ್ಯ ಎಂದು ಮಗು ಬೆರಗಾಗಿ ನೋಡಿತು.

ಎಂದು ವಿನ ನಂತರದ ವಾಕ್ಯದಲ್ಲಿ ಒಂದು ವೇಳೆ ಅಕರ್ಮಕ ಕ್ರಿಯೆ ಇದ್ದರೆ ಅದರ ಹಿಂದಿನ ವಾಕ್ಯವು ಉದ್ಧರಣಾರ್ಥಕವಿರದೇ, ಉದ್ದೇಶ, ಇಚ್ಛೆ ಮೊದಲಾದವನ್ನು ಸೂಚಿಸುವಂಥವು ಆಗಿರುತ್ತದೆ. ಉದಾಹರಣೆಗೆ :
ಕನಸು ಕಾಣಬೇಕು ಎಂದು ರವಿ ಬೇಗ ಮಲಗಿದ.

ಇಲ್ಲಿ ಮಲಗು ಅಕರ್ಮಕ ಕ್ರಿಯೆ ಇರುವುದರಿಂದ, ಎಂದು ವಿನ ಪೂರ್ವದ ವಾಕ್ಯ ರವಿಯ ಇಚ್ಛೆಯನ್ನು ಹೇಳುತ್ತದೆ. ಹೀಗೆ, ಅಕರ್ಮಕವಿದ್ದಾಗ ಉದ್ಧಾರಣಾರ್ಥಕವಲ್ಲದ ಬೇರೆ ಅರ್ಥಗಳನ್ನು ಆ ವಾಕ್ಯ ಕೊಡುತ್ತಿರುತ್ತದೆ.

ಪ್ರೇರಣಾರ್ಥಕ ಕ್ರಿಯೆ ಇದ್ದಾಗ ಅಕರ್ಮಕ ರೀತಿಯಲ್ಲೇ ಅರ್ಥ ಬರುತ್ತದೆ :
ಸಿನಿಮಾಕ್ಕೆ ಹೋಗಬೇಕು ಎಂದು ತಾಯಿ ಮಗುವಿಗೆ ಬೇಗ ಬೇಗ ಉಣಿಸಿದಳು.

ಉದ್ದೇಶದ ಅರ್ಥವನ್ನು ಇಲ್ಲಿಯೂ ನೋಡಬಹುದು.

## ಅಭ್ಯಾಸ - 3

(ಅ) ಕೆಳಗಿನ ವಾಕ್ಯಗಳು ಯಾವ ಪ್ರಕಾರದ ಮಿಶ್ರವಾಕ್ಯಗಳು ಎಂದು ಗುರುತಿಸಿರಿ.
ಮಗನೇನೋ ಧಾವಿಸಿ ಬಂದ ಆದರೆ ತಾಯಿ ಕೊನೆಯುಸಿರೆಳೆದಿದ್ದಳು. ( )
ನೀನು ಮನೆಗೇ ಹೋಗು ಏಕೆಂದರೆ ಅಲ್ಲಿ ತಮ್ಮ ಕಾಯುತ್ತಿದ್ದಾನೆ. ( )
ಇಷ್ಟು ಹಣ್ಣಿಗೆ ಐದು ರೂಪಾಯಿ ಕೊಡು, ಹೇಗೆಂದರೆ ಸೇಬಿಗೆ ಮೂರು ರೂಪಾಯಿ, ಮೋಸಂಬಿಗೆ ಎರಡು ರೂಪಾಯಿ. ( )
ಗೋಪಾಲ ಬಂದನೋ ಅಥವಾ ಇಲ್ಲವೋ. ( )
ಕಲ್ಲನಿಗೆ ನೇಗಿಲು ಕೊಡು ಮತ್ತು ಮಲ್ಲನಿಗೆ ಎತ್ತು ಕೊಡು. ( )
ಮಾಡಬೇಕು ಇಲ್ಲವೆ ಮಡಿಯಬೇಕು. ( )
ಹೋಗುವಾಗ, ಹೋಗಿಬರುವೆನು ಎಂದು ಹೇಳಬೇಕು. ( )

(ಆ) ಕೆಳಗಿನ ವಾಕ್ಯಗಳನ್ನು ಬೇರೆ ಸಂಬಂಧ ಸೂಚಕಗಳಿಂದ ಜೋಡಿಸಿ ಅರ್ಥದ ಸೂಕ್ಷ್ಮಪದರುಗಳನ್ನು ವಿವರಿಸಿರಿ.
ನಾಯಿಗೆ ಕಲ್ಲು ಎಸೆದೆ ________ ನನ್ನ ಕಾಲು ಕಲ್ಲಿಗೆ ತಾಕಿತು ( )
ನಾಯಿಗೆ ಕಲ್ಲು ಎಸೆದೆ ________ ನನ್ನ ಕಾಲು ಕಲ್ಲಿಗೆ ತಾಕಿತು ( )
ನಾಯಿಗೆ ಕಲ್ಲು ಎಸೆದೆ ________ ನನ್ನ ಕಾಲು ಕಲ್ಲಿಗೆ ತಾಕಿತು ( )
ನಾಯಿಗೆ ಕಲ್ಲು ಎಸೆದೆ ________ ನನ್ನ ಕಾಲು ಕಲ್ಲಿಗೆ ತಾಕಿತು ( )

(ಇ) ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ವಾಕ್ಯ ಭಾಗವನ್ನು ಪೂರ್ತಿಗೊಳಿಸಿರಿ.
........................ ಆದರೆ ಇವನೇಕೆ ಬರಲಿಲ್ಲ?
ತರಕಾರಿಗಳು ಆರೋಗ್ಯಕ್ಕೆ ಒಳ್ಳೆಯವು ಏಕೆಂದರೆ ........................
ಮದ್ರಾಸು ಸಮುದ್ರ ತೀರದಲ್ಲಿದೆ ಆದ್ದರಿಂದ ....................
..................ಎಂದು ಅವನೇಕೆ ಕೇಳಬೇಕು?
ಹಾವು ಸಾಯಲಿಲ್ಲ ಇಲ್ಲವೆ ..........................
ಸರಿಯಾದ ಆಹಾರ ಬೇಕು ಅಥವಾ ........................
......................ಹೇಗೆಂದರೆ ಒಂದಕ್ಕೆ ಎರಡು ರೂಪಾಯಿ.
ಸಂದೀಪನು ಪೇಟೆಗೆ ಹೋದ ಮತ್ತು ..................

## 4.5 ಸಂಯುಕ್ತ ವಾಕ್ಯಗಳು

ಸಂಯುಕ್ತ ವಾಕ್ಯಗಳಲ್ಲಿ ಒಂದು ಪ್ರಧಾನ ವಾಕ್ಯವಿದ್ದು, ಉಳಿದವು ಗೌಣ ವಾಕ್ಯಗಳಿರುತ್ತವೆ. ಹಿಂದೆ ನೋಡಿದ ಮಿಶ್ರ ಆಡಕವಾದ ವಾಕ್ಯಗಳೆಲ್ಲವೂ ಪ್ರಧಾನ ವಾಕ್ಯಗಳಾಗಿಯೇ ಇದ್ದು ಯಾವುದಾದರೊಂದು ಅವ್ಯಯದಿಂದ ಜೋಡುಸಲ್ಪಟ್ಟಿರುತ್ತದೆ. ಈ ವ್ಯತ್ಯಾಸವನ್ನು ಲಕ್ಷಿಸಬೇಕು. ಸಂಯುಕ್ತ ವಾಕ್ಯಗಳನ್ನು ನೋಡುವ ಪೂರ್ವದಲ್ಲಿ ಬೇರೆ ಬೇರೆ ಕಾರಕಾರ್ಥಗಳನ್ನು ಹೇಳುವ ಕೃದಂತ ವಿಶೇಷಣಗಳನ್ನು ನೋಡೋಣ. ಏಕೆಂದರೆ ಅವುಗಳೇ ವಿಸ್ತಾರಗೊಂಡು ಒಂದು ಪ್ರಕಾರದ ಗೌಣವಾಕ್ಯಗಳಾಗುತ್ತವೆ.

ಕೆಳಗಿನ ವಾಕ್ಯಗಳಲ್ಲಿ ಎತ್ತಿ ತೋರಿಸಿದ ಶಬ್ದಗಳನ್ನು ಗಮನಿಸಿರಿ:

ಬೆಂಗಳೂರಿನಿಂದ ನಿನ್ನೆ ಬಂದ ಹುಡುಗ ಇಂದು ಹೋದ. (ಕರ್ತೃ)
ಮೊದಲು ತಿಂದ ಹಣ್ಣು ರುಚಿಯಾಗಿತ್ತೆಂದು ಹುಡುಗ ಹೇಳಿದ. (ಕರ್ಮ)
ಮರ ಕಡಿದ **ಕೊಡಲಿ** ಹರಿತವಾಗಿದೆ. (ಕರಣ)
ದಾಸೋಹವಿಕ್ಕಿದ ಜಂಗಮ ಬಾಯಿ ತುಂಬ ಹರಸಿದ. (ಸಂಪ್ರದಾನ)
ಎಲೆಯುದಿರಿದ ಗಿಡ ಬೋಳಾಗಿ ನಿಂತಿತು. (ಅಪಾದಾನ)
ಈ ಬೀದಿಯಲ್ಲಿ ನಾವಿದ್ದ ಮನೆ ಇದೇನೇ. (ಅಧಿಕರಣ)

ಮೇಲಿನ ವಾಕ್ಯಗಳಲ್ಲಿ ಸೂಚಿಸಿದ ಶಬ್ದಗಳು ಬೇರೆ ಬೇರೆ ಕಾರಕಾರ್ಥಗಳಲ್ಲಿ ಪ್ರಯೋಗವಾಗಿವೆ ಎಂಬುದನ್ನು ನೋಡಬೇಕು. ಈ ರೀತಿಯ ಪ್ರಯೋಗಗಳು ಕನ್ನಡ ಭಾಷೆಗೆ ಸ್ವಾಭಾವಿಕವಾಗಿವೆ. ಆದರೂ ಶೈಲಿ ಭೇದದಿಂದಾಗಿ ಇವು ಕೆಳಗಿನಂತೆಯೂ ಪ್ರಯೋಗವಾಗುತ್ತವೆ.

ನಿನ್ನೆ ಬೆಂಗಳೂರಿಂದ ಯಾವ ಹುಡುಗ ಬಂದನೋ ಅವನು ಇಂದು ಹೋದ.
ಯಾವ ಹಣ್ಣನ್ನು ಹುಡುಗ ಮೊದಲು ತಿಂದನೋ ಅದು ರುಚಿಯಾಗಿತ್ತೆಂದು ಹೇಳಿದ.
ಯಾವ ಕೊಡಲಿಯಿಂದ ಮರ ಕಡಿಯಲಾಯಿತೋ ಅದು ಹರಿತವಾಗಿದೆ.
ಯಾವ ಜಂಗಮನಿಗೆ ದಾಸೋಹ ಇಕ್ಕಲಾಯಿತೋ ಅವನು ಬಾಯಿ ತುಂಬ ಹರಸಿದ.
ಯಾವ ಗಿಡದಿಂದ ಎಲೆ ಉದಿರಿದವೋ ಅದು ಬೋಳಾಗಿ ನಿಂತಿತು.
ಈ ಬೀದಿಯಲ್ಲಿ ಯಾವ ಮನೆಯಲ್ಲಿ ನಾವು ಇದ್ದೆವೋ ಅದು ಇದೇನೇ.

ಇವೆಲ್ಲ ಸಂಯುಕ್ತ ವಾಕ್ಯಗಳು ಎರಡೆರಡು ವಾಕ್ಯಗಳನ್ನೊಳಗೊಂಡಿವೆ. ಅವುಗಳಲ್ಲಿ ಒಂದು ಪ್ರಧಾನವಾದರೆ ಇನ್ನೊಂದು ಗೌಣ. ಗೌಣ ವಾಕ್ಯವು, ಯಾವ ಸರ್ವನಾಮವನ್ನು ಹೊಂದಿದ್ದು. ಅದು ಮುಖ್ಯ ವಾಕ್ಯದ 'ಅದು, ಅವನು', ಸರ್ವನಾಮದೊಡನೆ ಸಂಬಂಧ ತೋರಿಸುತ್ತದೆ. ಕಾರಕಗಳು ಸೂಕ್ತ ವಿಭಕ್ತಿ ಪ್ರತ್ಯಯ ಪಡೆದು ಗೌಣ ವಾಕ್ಯದಲ್ಲಿರುತ್ತವೆ. ಈ ರೀತಿಯ ವಾಕ್ಯ ರಚನೆಗಳೂ ಕನ್ನಡಕ್ಕೆ ಹೊರತಲ್ಲ.

## ಅಭ್ಯಾಸ - 4

(ಅ) ಕೆಳಗಿನ ವಾಕ್ಯಗಳಲ್ಲಿ ಕೃದಂತ ವಿಶೇಷಣಗಳ ಬದಲು ಗೌಣ ವಾಕ್ಯ ಪ್ರಯೋಗಿಸಿ ಬರೆಯಿರಿ.

ಕೋತಿ ಏರಿದ ಮರ ಬಹಳ ಎತ್ತರವಿರಲಿಲ್ಲ.

ಬಹಳ ಮಕ್ಕಳಿದ್ದ ವರ್ಗದಲ್ಲಿ ಗಲಾಟೆಯಾಗುತ್ತಿದೆ.

.....................................................................................................

ಪ್ರವಾಸಿಗರು ಹೋದ ಊರು ಅನುಕೂಲವಾಗಿರಲಿಲ್ಲ.

.....................................................................................................

ನೀರು ಸುರಿದ ಪಾತ್ರೆ ದುಂಡನೆ ಇರಬೇಕಿತ್ತು.

.....................................................................................................

ದಾನ ಕೊಟ್ಟ ಕೈ ಎಂದೂ ಕೆಳಗೆ ಆಗುವುದಿಲ್ಲ.

.....................................................................................................

ನಿನ್ನೆ ಪತ್ರ ಕೊಟ್ಟ ಅಂಚೆಯವ ಇಂದು ವರ್ಗವಾಗಿ ಹೋದನಂತೆ.

.....................................................................................................

(ಆ) ಕೆಳಗಿನ ವಾಕ್ಯಗಳಲ್ಲಿಯ ಗೌಣ ವಾಕ್ಯಗಳಿಗೆ ಪ್ರತಿಯಾಗಿ ಕೃದಂತ ವಿಶೇಷಣ ಪ್ರಯೋಗಿಸಿ ಬರೆಯಿರಿ.

ಯಾವ ರಂಗಮಂದಿರದಲ್ಲಿ ನೃತ್ಯ ನಡೆಯಿತೋ ಅದು ಇಂದು ಮುಚ್ಚಿದೆ.

.....................................................................................................

ಯಾವ ಪ್ರಾಣಿಯಿಂದ ಭಯವಿತ್ತೋ ಅವನ್ನೆಲ್ಲ ಕೊಂದು ಹಾಕಿದರು.

.....................................................................................................

ಯಾವ ಭಿಕ್ಷುಗಳಿಗೆ ಅನ್ನವಿಕ್ಕಿದರೋ ಅವರು ಸ್ವಸ್ತಿ ಎಂದರು.

..............................................................................................

ಯಾವ ಲೇಖನಿಯಿಂದ ಒಳ್ಳೆ ಕತೆ ಬಂತೋ ಅದೇ ಇಷ್ಟು ಕೆಟ್ಟ ಕಾದಂಬರಿ ಬರೆದಿದೆ.

..............................................................................................

(ಇ) ಹಿಂದೆ ತೋರಿಸಿದ ವಿವಿಧ ಪ್ರಕಾರದ ವಾಕ್ಯಗಳಲ್ಲದೇ ಬೇರೆ ಯಾವ ವಿಧದ ವಾಕ್ಯಗಳು ಕಂಡು ಬಂದರೆ ಅವನ್ನು ಪಟ್ಟಿ ಮಾಡಿರಿ. ಅವುಗಳನ್ನು ವಿವರಿಸಲ್ಪಟ್ಟ ಪ್ರಕಾರಗಳಲ್ಲಿ ಸೇರಿಸಬಹುದೇ ಅಥವಾ ಬಾರದೇ? ಬಾರದು ಎಂದಾದರೆ ಅವುಗಳನ್ನು ಹೇಗೆ ವಿವರಿಸುವಿರಿ?

## 4.6 ಸಾರಾಂಶ

ಈ ಅಂಶದಲ್ಲಿ ನಾವು ವಾಕ್ಯ ಭೇಧಗಳನ್ನು ಪ್ರಯೋಗಗಳನ್ನು ತಿಳಿದುಕೊಂಡೆವು. ಈ ಅಂಶದಲ್ಲಿ ಬರುವ ಮುಖ್ಯಾಂಶಗಳನ್ನು ಮತ್ತೊಮ್ಮೆ ಸ್ಮರಿಸೋಣ.

ವಾಕ್ಯ ಭೇದಗಳನ್ನು ಅರಿತುಕೊಳ್ಳುವ ಮೂರು ವಿಧಗಳು
(1) ವಾಕ್ಯ ರಚನೆ (2) ವಾಕ್ಯಾರ್ಥ ಬೋಧೆ (3) ವಾಕ್ಯ ವಿಭಜನೆ.

ವಾಕ್ಯಗಳಲ್ಲಿ ಮೂರು ಪ್ರಕಾರಗಳು. (1) ಸರಳ ವಾಕ್ಯ (2) ಮಿಶ್ರ ವಾಕ್ಯ (3) ಸಂಯುಕ್ತ ವಾಕ್ಯ

ಸರಳ ವಾಕ್ಯದಲ್ಲಿ ಒಂದು ಮುಖ್ಯ ಕ್ರಿಯಾಪದವಿರುತ್ತದೆ. ಅದಕ್ಕೆ ಪೂರಕವಾಗುವಂತೆ ಕರ್ತೃ, ಕರ್ಮಪದಗಳು ಇರುತ್ತವೆ.

ಕರ್ತೃ ಮೊದಲಾದವುಗಳು ಕ್ರಿಯೆಗೆ ಸಂಬಂಧಪಟ್ಟವುಗಳಾದ್ದರಿಂದ ಇವುಗಳಿಗೆ ಕ್ರಿಯಾಕಾರಕ ಅಥವಾ ಕಾರಕ ಎಂದೆನ್ನುತ್ತಾರೆ.
ಕಾರ್ಯ ಮಾಡುವ ವ್ಯಕ್ತಿ ಕರ್ತೃ.

ಕ್ರಿಯೆಯ ಪರಿಣಾಮವನ್ನು ಅಥವಾ ಫಲವನ್ನು ಸ್ವೀಕರಿಸುವುವಂಥವುಗಳು ಕರ್ಮಗಳು.
ಕಾರ್ಯ ಸಾಧಕ ವಸ್ತುಗಳು ಕರಣ.
ಕೊಡಲಾದ ವಸ್ತುವನ್ನು ಸ್ವೀಕರಿಸುವ ಪಾತ್ರವಾದವುಗಳು ಸಂಪ್ರದಾನ.
ಅಗಲುವಿಕೆಯ ಅಥವಾ ಕಾರ್ಯದ ಬೇರ್ಪಡೆ ತಿಳಿಸುತ್ತದೆ. ಆದ್ದರಿಂದ ಅಪಾದಾನ.
ಕ್ರಿಯೆ ನಡೆಯುವ ಸ್ಥಾನವನ್ನು ಸೂಚಿಸುವುದರಿಂದ ಅಧಿಕರಣ.
ಸರಳ ವಾಕ್ಯಗಳಲ್ಲಿ ಪ್ರಮುಖ ಪ್ರಕಾರಗಳು ಯಾವುವೆಂದರೆ ಕರ್ತೃ ಪ್ರಧಾನ ವಾಕ್ಯ ಸಮೀಕರಣಾತ್ಮಕ ವಾಕ್ಯ, ಚತುರ್ಥಿ ಕರ್ತೃಕ ವಾಕ್ಯ, ಕರ್ಮ ಪ್ರಧಾನ ವಾಕ್ಯ ಮತ್ತು ನಿಷೇಧ ವಾಕ್ಯ

ಮಿಶ್ರವಾಕ್ಯಗಳಲ್ಲಿ ಮುಖ್ಯ ಕ್ರಿಯಾಪದಗಳುಳ್ಳ ಅನೇಕ ವಾಕ್ಯಗಳನ್ನು ಸೇರಿಸಲಾಗಿದೆ. ಇದರಲ್ಲಿ ಏಳು ಪ್ರಕಾರಗಳಿವೆ. ಅವು ಯಾವುವೆಂದರೆ ಸಮುಚ್ಚಯ, ವಿಚಯ, ವಿರುದ್ಧಾರ್ಥಕ, ಕಾರ್ಯಕಾರಣ ಸಂಬಂಧಿ, ವಿವರಣಾತ್ಮಕ, ವಿಕಲ್ಪಾರ್ಥಕ, ಉದ್ಧರಣಾರ್ಥಕ.

ಸಂಯುಕ್ತ ವಾಕ್ಯಗಳಲ್ಲಿ ಒಂದು ಪ್ರಧಾನವಾಕ್ಯವಿದ್ದು, ಉಳಿದವು ಗೌಣ ವಾಕ್ಯಗಳಿರುತ್ತದೆ.

## ಅಭ್ಯಾಸಗಳಿಗೆ ಉತ್ತರಗಳು

**ಅಭ್ಯಾಸ - 1**

(ಅ) ಸರಳ ವಾಕ್ಯ
ಇತರ ವಾಕ್ಯ
ಇತರ ವಾಕ್ಯ
ಸರಳವಾಕ್ಯ

(ಆ) ಅಧಿಕರಣ
ಅಪಾದಾನ
ಸಂಪ್ರದಾನ
ಕರ್ತೃ
ಕರ್ಮ
ಕರಣ

(ಇ) ಸಮೀಕರಣಾತ್ಮಕ ವಾಕ್ಯ
ಚತುರ್ಥಿ ಕರ್ತೃಕ ವಾಕ್ಯ
ಕರ್ತೃ ಪ್ರಧಾನ ವಾಕ್ಯ
ಚತುರ್ಥಿ ಕರ್ತೃಕ ವಾಕ್ಯ
ಸಮೀಕರಣಾತ್ಮಕ ವಾಕ್ಯ
ಕರ್ತೃ ಪ್ರಧಾನ ವಾಕ್ಯ

(ಈ) ಆಟಗಳಲ್ಲಿ
ಕೈಯಿಂದ
ಅಕ್ಕಸಾಲಿಗನಿಗೆ
ಮರದಿಂದ
ಕೆಲಸವನ್ನು

**ಅಭ್ಯಾಸ - 2**

(ಅ) ದುಂಬಿಗೆ ಹೂವಿನಿಂದ ಆಹ್ವಾನ ಕೊಡಲ್ಪಡುತ್ತದೆ.
ತಲೆಯಲ್ಲಿದ್ದ ವಿಚಾರವು ಬಾಯಿಯಿಂದ ನುಡಿಯಲ್ಪಡಲಿಲ್ಲ.
ಮನುಷ್ಯನು ಮನುಷ್ಯನಿಂದಲೇ ಕೊಲ್ಲಲ್ಪಡುತ್ತಾನೆ.
ಇದು ಯಾವ ರೀತಿ ಎಂಬ ಪ್ರಶ್ನೆ ಕೇಳಲ್ಪಡಬಾರದು.

(ಆ) ಮರದಿಂದ ಮರಕ್ಕೆ ಭಿನ್ನತೆ ಇಲ್ಲ.
ಅದಕ್ಕೂ ಇದಕ್ಕೂ ಎಷ್ಟು ಅಂತರವಿಲ್ಲ.
ಅವನು ಅಹಂಕಾರಿಯಲ್ಲ.
ಪರೀಕ್ಷೆ ಮುಂದೆ ಹಾಕಲಾಗಿಲ್ಲ.

**ಅಭ್ಯಾಸ - 3**

(ಅ) ವಿರುದ್ಧಾರ್ಥಕ
ಕಾರ್ಯಕಾರಣ
ವಿವರಣಾತ್ಮಕ
ವಿಜಯ
ಸಮುಚ್ಚಯ
ವಿಕಲ್ಪಾರ್ಥಕ
ಉದ್ಧರಣಾರ್ಥಕ

(ಆ) ನಾಯಿಗೆ ಕಲ್ಲು ಎಸೆದ ಆದರೆ ನನ್ನ ಕಾಲು ಕಲ್ಲಿಗೆ ತಾಕಿತು.
ನಾಯಿಗೆ ಕಲ್ಲು ಎಸೆದೆ ಏಕೆಂದರೆ ನನ್ನ ಕಾಲು ಕಲ್ಲಿಗೆ ತಾಕಿತು.
ನಾಯಿಗೆ ಕಲ್ಲು ಎಸೆದೆ ಆದ್ದರಿಂದ ನನ್ನ ಕಾಲು ಕಲ್ಲಿಗೆ ತಾಕಿತು.
ನಾಯಿಗೆ ಕಲ್ಲು ಎಸೆದೆ ಮತ್ತು ನನ್ನ ಕಾಲು ಕಲ್ಲಿಗೆ ತಾಕಿತು.

(ಇ) ರೈಲು ಬಂತು
ಅದು ಪೌಷ್ಠಿಕ ಆಹಾರ
ಹಡಗಿನ ಪ್ರಯಾಣ ಸಾಧ್ಯವಾಗುತ್ತದೆ
ಇದು ಒಳ್ಳೆಯದೇ
ಕೋಲು ಮುರಿಯಲಿಲ್ಲ
ಇದಕ್ಕೆ ನಾಲ್ಕು ರೂಪಾಯಿ ಕೊಡಬೇಕು
ಸರಕನ್ನು ತಂದ.

**ಅಭ್ಯಾಸ - 4**

(ಅ) ಯಾವ ಮರವನ್ನು ಕೋತಿ ಏರಿತೋ ಅದು ಬಹಳ ಎತ್ತರವಿರಲಿಲ್ಲ.
ಯಾವ ವರ್ಗದಲ್ಲಿ ಬಹಳ ಮಕ್ಕಳು ಇದ್ದಾರೆಯೋ ಅಲ್ಲಿ ಗಲಾಟೆಯಾಗುತ್ತಿದೆ.
ಯಾವ ಊರಿಗೆ ಪ್ರವಾಸಿಗರು ಹೋದರೋ ಅದು ಅನುಕೂಲವಾಗಿರಲಿಲ್ಲ.
ಯಾವ ಪಾತ್ರೆಯಲ್ಲಿ ನೀರು ಸುರಿಯಿತೋ ಅದು ದುಂಡಗೆ ಇರಬೇಕಿತ್ತು
ಯಾವ ಕೈ ದಾನ ಕೊಡುವುದೋ ಅದು ಎಂದೂ ಕೆಳಗೆ ಆಗುವುದಿಲ್ಲ.
ಯಾವ ಅಂಚೆಯವ ನಿನ್ನೆ ಪತ್ರ ಕೊಟ್ಟನೋ ಅವನು ಇಂದು ವರ್ಗವಾಗಿ ಹೋದನಂತೆ.

(ಆ) ನೃತ್ಯ ನಡೆದ ರಂಗಮಂದಿರ ಇಂದು ಮುಚ್ಚಿದೆ.
ಭಯ ಪಡಿಸುವ ಪ್ರಾಣಿಗಳನ್ನೆಲ್ಲ ಕೊಂದು ಹಾಕಿದರು.
ಅನ್ನ ವಿಕ್ಕಿಸಿಕೊಂಡ ಭಿಕ್ಷುಗಳು ಸ್ವಸ್ತಿ ಎಂದರು.
ಒಳ್ಳೆ ಕತೆ ಬಂದ ಲೇಖನಿಯಿಂದ ಇಷ್ಟು ಕೆಟ್ಟ ಕಾದಂಬರಿ ಬಂದಿದೆ.

(ಇ) ಉದಾಹರಣೆಗೆ ಮಳೆ ಬಿದ್ದು ಬೆಳೆ ಬಂತು.
**ನಾಳೆ ಬರುವೆನೆಂದು ಸ್ನೇಹಿತ ಹೇಳಿದ ಇತ್ಯಾದಿ.**